# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ-1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್-2022 ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)

ಸಂಖ್ಯೆ: ಪ.ವಿ.8.6/07(2)/2015-16

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ ಮೈಸೂರು-570005,
ದಿನಾಂಕ: 14-12-2022

## ಸುತ್ತೋಲೆ

ವಿಷಯ: ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಕುಂದು-ಕೊರತೆಗಳ ನಿವಾರಣೆ ಕಾರ್ಯಕ್ರಮವನ್ನು ಆಯೋಜಿಸಿರುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022, ಬೆಂಗಳೂರು, ದಿನಾಂಕ: 01.12.2022.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರ ಆದೇಶನುಸಾರ ಡಿಸೆಂಬರ್ 01, 2022 ರಿಂದ ಡಿಸೆಂಬರ್ 25, 2022 ರವರೆಗೆ ಸುಶಾಸನ (Good Governance) ಮಾಹೆಯನ್ನು ಆಚರಿಸಲಾಗುತ್ತಿದೆ. ಇದರ ಪ್ರಯುಕ್ತ ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟ ಕುಂದುಕೊರತೆಗಳಿದ್ದಲ್ಲಿ, ಅವುಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಲು ದಿನಾಂಕ:21.12.2022ರಂದು ಕೆಳಕಂಡ ವೇಳಾಪಟ್ಟಿಯನುಸಾರ ಮೌಲ್ಯಭವನ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ಇಲ್ಲಿ **"ಸ್ನಾತಕ ಪದವಿ (UG), ಸ್ನಾತಕೋತ್ತರ ಪದವಿ (PG) ಹಾಗೂ ಸಂಶೋಧನಾ (Ph.D)- ವಿದ್ಯಾರ್ಥಿ ಕುಂದು ಕೊರತೆಗಳ ನಿವಾರಣಾ ಕಾರ್ಯಕ್ರಮ"** ಏರ್ಪಡಿಸಲಾಗಿದೆ.

| ಪದವಿ | ಸಮಯ |
|---|---|
| ಸ್ನಾತಕ ಪದವಿ (UG) | 10.30 A.M |
| ಸ್ನಾತಕೋತ್ತರ ಪದವಿ (PG) | 11.30 A.M |
| ಪಿ.ಹೆಚ್‌ಡಿ (Ph.D) | 12.30 P.M |

ಈ ವಿಷಯವನ್ನು ನಿಮ್ಮ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತಂದು ಕಾರ್ಯಕ್ರಮದಲ್ಲಿ ಖುದ್ದು ಭಾಗವಹಿಸಿ, ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟ ಕುಂದು-ಕೊರತೆ/ದೂರುಗಳಿದ್ದಲ್ಲಿ ಪರಿಹರಿಸಿಕೊಳ್ಳಲು ಸೂಚಿಸಬೇಕೆಂದು ತಿಳಿಸಲಾಗಿದೆ.

ಮುಂದುವರಿದು, ಪರೀಕ್ಷಾ ವಿಭಾಗದಲ್ಲಿ ಪ್ರತ್ಯೇಕವಾಗಿ ವಿದ್ಯಾರ್ಥಿ ಕುಂದು-ಕೊರತೆಗಳ ಕೋಶ ಸ್ಥಾಪಿಸಿದ್ದು, ಮುಂದಿನ ದಿನಗಳಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟ ದೂರುಗಳು ಇದ್ದಲ್ಲಿ ಕೆಳಕಂಡ ವಿಳಾಸಕ್ಕೆ ದೂರನ್ನು ಸಲ್ಲಿಸಬಹುದಾಗಿದೆ.

**ವಿಳಾಸ:** ಡಾ ಆರ್ ಎಸ್ ಉಮಾಕಾಂತ್
ವಿಶೇಷಾಧಿಕಾರಿಗಳು
ವಿದ್ಯಾರ್ಥಿ ಕುಂದು-ಕೊರತೆಗಳ ಕೋಶ
ಪರೀಕ್ಷಾ ಭವನ, ಕ್ರಾಫರ್ಡ್ ಭವನ ಹಿಂಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ದೂರವಾಣಿ: 0821-2419384

ದೂರು ಸಲ್ಲಿಸಲು twitter ಖಾತೆಯನ್ನು ಸಹ ತೆರೆದಿದ್ದು ಇದರ ಮುಖಾಂತರವು ಕೂಡ ಶಿಕ್ಷಕರು/ ವಿದ್ಯಾರ್ಥಿಗಳು ದೂರು ಸಲ್ಲಿಸಬಹುದಾಗಿದೆ ( @re_uom)

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಸಂಬಂಧಪಟ್ಟವರ ಗಮನಕ್ಕೆ ಈ ಕೂಡಲೇ ತರಬೇಕಾಗಿ ಮತ್ತೊಮ್ಮೆ ಕೋರಲಾಗಿದೆ.

14/12/22

ಕುಲಸಚಿವ (ಪರೀಕ್ಷಾಂಗ)

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು/ನಿರ್ದೇಶಕರು/ಡೀನರು, ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು/ಜೆ.ಎಸ್.ಎಸ್. ಕಾಲೇಜು ವಾಕ್ ಮತ್ತು ಶ್ರವಣ ಸಂಸ್ಥೆ, ಜೆ.ಎಸ್.ಎಸ್ ಕಾಲೇಜು, ಎಂ.ಜಿ. ರಸ್ತೆ, ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವ), ಸಿದ್ಧಾರ್ಥನಗರ, ಮೈಸೂರು.
2. ಅಧ್ಯಕ್ಷರು/ಮುಖ್ಯಸ್ಥರು-ಎಲ್ಲಾ ಅಧ್ಯಯನ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು, ಸ್ನಾತಕೋತ್ತರ ಕೇಂದ್ರ-ಮಂಡ್ಯ, ಹಾಸನ ಮತ್ತು ಚಾಮರಾಜನಗರ.
3. ಪ್ರಾಂಶುಪಾಲರು-ಎಲ್ಲಾ ಬಿ.ಇಡ್ ಕಾಲೇಜುಗಳು.
4. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಸಂಶೋಧನ ಕೇಂದ್ರದ ಮುಖ್ಯಸ್ಥರುಗಳು.
5. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.